**ದಿನಾಂಕ 03-03-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶದ ಮೇರೆಗೆ**
**ಮುಂದುವರೆದ ಮುಖ್ಯ ವಿಚಾರಣೆ :ಶ್ರೀ.ಎಸ್.ಪಿ.ವಿ ವಕೀಲರಿಂದ ವಾದಿ ಪರವಾಗಿ**

ನಾನು ಈಗ ಮುಟೇಶನ ಎಂಟ್ರಿ ಸಂಖ್ಯೆ 175 ರ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-4 ಎಂದು, ಸರ್ವೆ ನಂ.83/2 ಕೆ3 ರ ಕೈ ಬರಹ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಸದರಿ ದಾಖಲಾತಿ ಪೂರ್ತಿಯಾಗಿ ಓದಲು ಬರದಂತಹ ದಾಖಲಾತಿ ಇದ್ದು, ಅದರ ಬೆರಳಚ್ಚು ಪ್ರತಿ ಹಾಜರಪಡಿಸುವ ಷರತ್ತಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ನಿಪಿ-5 ಎಂದು, ಮುಟೇಶನ ಎಂಟ್ರಿ ಸಂಖ್ಯೆ 926, 550, 1311, 1798 ರ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳಲ್ಲಿ ಮುಟೇಶನ ಎಂಟ್ರಿ ಸಂಖ್ಯೆ 996 ಮತ್ತು 1798 ರ ಬೆರಳಚ್ಚು ಪ್ರತಿಗಳನ್ನು ಹಾಜರಪಡಿುವ ಷರತ್ತಿಗೆ ಒಳಪಟ್ಟು ದಾಖಲಾತಿಗಳನ್ನು ಕ್ರಮವಾಗಿ ನಿಪಿ-6 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿದಂತೆ ಡಿಕ್ರಿ ಆಗಬೇಕಾಗಿ ವಿನಂತಿ.

ಪ್ರತಿವಾದಿ ಪರ ವಕೀಲರು ಗೈರು ಹಾಜರ ಇದ್ದು, ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )
ಓ. ಹೇ. ಕೇ. ಸರಿ ಅದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ